**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ :29.11.2024**

**ಪಾಟೀ ಸವಾಲು - ಪ್ರತಿವಾದಿಗಳ ಪರ ವಕೀಲರಿಂದ :**

ನಾನು ಬಿ.ಕಾಂ ಓದಿರುತ್ತೇನೆ. ನಾನು ವ್ಯವಸಾಯ ಮಾಡಿಕೊಂಡಿದ್ದು, ವ್ಯವಸಾಯದಿಂದ ನನಗೆ ಪ್ರತಿ ತಿಂಗಳು 50 ರಿಂದ 60 ಸಾವಿರ ಆದಾಯ ಇದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ತಯಾರಿಸಲು ನಾನು ಸ್ವತಃ ಮಾಹಿತಿ ನೀಡಿರುತ್ತೇನೆ. ಪ್ರತಿವಾದಿಗಳು ಮತ್ತು ನಾನು ಸಂಬಂಧಿಕರಲ್ಲ ಹಾಗೂ ಸ್ನೇಹಿತರು ಅಲ್ಲ. ಪ್ರತಿವಾದಿಗಳ ಜೊತೆ ಕೆಲಸ ಮಾಡುವ ನವೀನ್ ಕುಮಾರ್ ನನ್ನ ಸ್ನೇಹಿತರು. ನನಗೆ ವ್ಯವಸಾಯದ ಖರ್ಚೆಲ್ಲಾ ಹೋಗಿ 50 ರಿಂದ 60 ಸಾವಿರ ರೂಪಯಿ ಉಳಿತಾಯ ಇರುತ್ತದೆ. ನಾನು ವ್ಯವಸಾಯದ ಜೊತೆ ಬೇರೆ ಯಾವುದೇ ವ್ಯವಹಾರ ಅಥವಾ ಕೆಲಸ ಮಾಡುವುದಿಲ್ಲ. ನಾನು ವ್ಯವಸಾಯದ ಜೊತೆ ಬಡ್ಡಿ ವ್ಯವಹಾರ ಮಾಡುತ್ತೇನೆಂದರೆ ಸರಿಯಲ್ಲ. ಪ್ರತಿವಾದಿಗಳು ನವೀನ್ ಮುಖಾಂತರ ದಾವ ಸ್ವತ್ತನ್ನು ಮಾರಾಟ ನನ್ನನ್ನು ಸಂಪರ್ಕಿಸಿರುತ್ತಾರೆ. ದಾವ ಸ್ವತ್ತು 1 ನೇ ಪ್ರತಿವಾದಿಯ ಹೆಸರಿನಲ್ಲಿದೆ. 1 ನೇ ಪ್ರತಿವಾದಿಗೆ ಅವರ ಗಂಡನಿಂದ ದಾವ ಸ್ವತ್ತು ಬಂದಿರುತ್ತದೆ. ದಾವ ಸ್ವತ್ತು 1 ನೇ ಪ್ರತಿವಾದಿಗೆ ಅವರ ಗಂಡನ ಕಡೆಯಿಂದ ಬಂದಿರುವುದಿಲ್ಲ ಒಟ್ಟು ಕುಟುಂಬದಲ್ಲಿ ಭಾಗ ಆದಾಗ ಅವರ ಹಿಸ್ಸಗೆ ಬಂದಿರುತ್ತದೆ ಎಂದರೆ ಅವರ ಗಂಡನ ಕಡೆಯಿಂದ ವಿಭಾಗದಲ್ಲಿ ಬಂದಿರುತ್ತದೆ ಎಂದು ನುಡಿಯುತ್ತೇನೆ. ಆ ಬಗ್ಗೆ ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಪ್ರತಿವಾದಿಗಳು ವಿಭಾಗ ಪತ್ರದ ಪ್ರತಿ ನೀಡಿರುವುದಿಲ್ಲ. ನವೀನ್ ಕುಮಾರ್ ನಮ್ಮೂರಿನವರು. ಪ್ರತಿವಾದಿಗಳು ನವೀನ್ ಕುಮಾರ್ ಮುಖಾಂತರ ನನ್ನ ಬಳಿ ಸಾಲ ಕೇಳಿದ್ದು, ನಾನು ಬಡ್ಡಿಗೆ ಸಾಲ ನೀಡಿರುತ್ತೇನೆಂದರೆ ಸರಿಯಲ್ಲ. ದಾವ ಸ್ವತ್ತಿನ ದಾಖಲೆಗಳನ್ನು ಸಂಬಂಧಿಸಿದ ಕಚೇರಿಗೆ ಅರ್ಜಿ ಸಲ್ಲಿಸಿ ಪಡೆದುಕೊಳ್ಳಲು ನನಗೆ ತೊಂದರೆ ಇರಲಿಲ್ಲ. ದಿನಾಂಕ 31.12.2019 ರಂದು ಕರಾರು ಪತ್ರ ಮಾಡಿಕೊಂಡಾಗ ನಾನು ಪ್ರತಿವಾದಿಗಳಿಗೆ 3 ಲಕ್ಷ ರೂಪಾಯಿ ನಗದು ಮತ್ತು 3 ಲಕ್ಷ ರೂಪಾಯಿ ಆರ್ ಟಿ ಜಿ ಎಸ್ ಮುಖಾಂತರ ಪಾವತಿಸಿರುತ್ತೇನೆ. 2 ದಿನ ಬಿಟ್ಟು ತಲಾ ಒಂದು ವರೆ ಲಕ್ಷ ರೂಪಾಯಿಗಳ 2 ಚೆಕ್ಕುಗಳನ್ನು ನೀಡಿರುತ್ತೇನೆ. ನವೀನ್ ಅವರ ಜೊತೆ ಚಂದ್ರಶೇಖರ್ ಮತ್ತು ಕುಮಾರ್ ವ್ಯವಹಾರದ ಬಗ್ಗೆ ಮಧ್ಯವರ್ತಿಗಳಾಗಿ ಬಂದಿದ್ದರು. ಅವರಿಬ್ಬರು ನನಗೆ ದೇವನಹಳ್ಳಿ ಸಿಕ್ಕಿದ್ದರು. ನಾನು ಮಧ್ಯವರ್ತಿಗಳನ್ನು ಸ್ವತಃ ಕರೆದುಕೊಂಡು ಹೋಗಿ ಸಾಲದ ವ್ಯವಹಾರದ ಬಗ್ಗೆ ಪ್ರತಿವಾದಿಗಳಿಂದ ಕರಾರು ಪತ್ರ ಮಾಡಿಕೊಂಡಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗಳ ಕಡೆಯಿಂದ ಯಾರು ಮಧ್ಯವರ್ತಿಗಳು ಬಂದಿರಲಿಲ್ಲ. ನಾನು ಉದೇಶ ಪೂರಕವಾಗಿ ಪ್ರತಿವಾದಿಗಳ ಕಡೆಯಿಂದ ಯಾರನ್ನು ಕರೆಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರ್ ಟಿ ಜಿ ಎಸ್ ಮುಖಾಂತರ ಹಣ ಪಾವತಿಸಿರುವುದನ್ನು ಕರಾರು ಅಥವಾ ವಾದ ಪತ್ರ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಚೆಕ್ಕನ್ನು ಯಾರ ಹೆಸರಿಗೆ ನೀಡಿದ್ದೇನೆಂದು ಎಂದು ಕೇಳಲು

ಸದರಿ ಚೆಕ್ಕುಗಳಲ್ಲಿ ಹೆಸರು ನಮೂದಿಸದೇ ಪ್ರತಿವಾದಿಗಳಿಗೆ ನೀಡಿರುತ್ತೇನೆ. ಆ ಬಗ್ಗೆ ನನ್ನ ವಾದ ಪತ್ರ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ಕರಾರು ಪತ್ರದ ಪ್ರಕಾರ ಕ್ರಯ ಪತ್ರವನ್ನು ಒಂದು ವರ್ಷದ ಒಳಗೆ ಮಾಡಿಕೊಡಬೇಕಾಗಿತ್ತು. ನಾನು ನಿಪಿ-2 ನ್ನು ಸದರಿ ಒಂದು ವರ್ಷ ಅವಧಿ ಮುಗಿಯುವ ಸುವಾರು 15 ದಿನ ಮೊದಲು ಕಳಿಸಿರುತ್ತೇನೆ. ದಾವ ಸ್ವತ್ತನ್ನು ಖರೀದಿ ಮಾಡುವಂತೆ ಕೇಳಲು ಪ್ರತಿವಾದಿಗಳು ಸ್ವತಃ ಬಂದು ಮೌಖಿಕವಾಗಿ ಕೇಳಿಕೊಂಡಿರುತ್ತಾರೆ. ಕಾನೂನು ನೋಟಿಸ್ ಪ್ರತಿವಾದಿಗಳಿಗೆ ಜಾರಿಯಾಗಿರುವುದಿಲ್ಲ ಹಾಗೂ ಅವರು ಬಂದು ನನ್ನನ್ನು ಕೇಳದೇ ಇದ್ದರೂ ಸಹ ವಿನಾ ಕಾರಣ ನಿಪಿ-2 ನ್ನು ಜಾರಿ ಮಾಡಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿಗಳು 15 ದಿನ ಸಮಯ ಅವಕಾಶ ಕೇಳಿದ್ದು, 2 ನೇ ನೋಟಿಸ್‌ನ್ನು 15 ದಿನದ ಒಳಗೆ ಕಳುಹಿಸಿರುತ್ತೇನೆ. ನಾನು ನಿಪಿ-8 ನ್ನು ನಿಪಿ-2 ನ್ನು ಕಳುಹಿಸಿದ 3 ತಿಂಗಳ ನಂತರ ಕಳುಹಿಸಿರುತ್ತೇನೆಂದರೆ ನಾನು ನಮ್ಮ ವಕೀಲರಿಗೆ ತಿಳಿಸಿದ್ದೆ ಅವರು ಯಾವಾಗ ಕಳುಹಿಸಿರುತ್ತಾರೆಂದು ನುಡಿಯುತ್ತೇನೆ. ಪ್ರತಿವಾದಿಗಳು ಸದರಿ ವಿಳಾಸದಲ್ಲಿ ಇದ್ದರೂ ಸಹ ಅಂಚೆ ಇಲಾಖೆಯವರ ಜೊತೆ ಶಾಮೀಲಾಗಿ ಅವರು ಅಲ್ಲಿ ವಾಸವಿಲ್ಲ ಎಂದು ಬರೆಸಿಕೊಂಡಿರುತ್ತೇನೆಂದರೆ ಸರಿಯಲ್ಲ.

**( ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿಗಳ ಪರ ವಕೀಲರು ಸಮಯ ಅವಕಾಶ ಕೋರಿದ್ದರಿಂದ ಪ್ರಕರಣವನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ದೇವನಹಳ್ಳಿ.**